8. ದೇವನಹಳ್ಳಿ ತಾಲ್ಲೂಕು, ಬೆಟ್ಟಕೋಟೆ ಗ್ರಾಮದ ಸ.ನಂ. 235ರಲ್ಲಿ 30–00 ಎಕರೆ ಅರಿಶಿನಕುಂಟೆ ಗ್ರಾಮದ ಸ.ನಂ. 98ರಲ್ಲಿ 25–15 ಎಕರೆ ಜಮೀನನ್ನು ಕರ್ನಾಟಕ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತರವರಿಗೆ ಕ್ರಯಕ್ಕೆ ನೀಡಿದೆ.

ಉಡುಪಿ ಜಿಲ್ಲೆಯಲ್ಲಿ ಅಕ್ರಮ ಕಳ್ಳಭಟ್ಟಿ ಸಾರಾಯಿ ತಯಾರಿಕಾ ಕೇಂದ್ರಗಳು

207 (374) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ತಯಾರಿಸುತ್ತಿರುವ ಕೇಂದ್ರಗಳು ಉಡುಪಿ ಜಿಲ್ಲೆಯಲ್ಲಿ ವ್ಯಾಪಕವಾಗಿ ಹರಡುತ್ತಿದ್ದು ಈಗಾಗಲೇ ಇಂತಹ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ: (ಸಂಪೂರ್ಣ ಮಾಹಿತಿಯೊಂದಿಗೆ ಕ್ಷೇತ್ರವಾರು ವಿವರ ನೀಡುವುದು);

ಆ) ಈ ಸಂಬಂಧ ವಿಶೇಷ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಅಗತ್ಯ ಕ್ರಮ ಕೈಗೊಳ್ಳಲಾಗುವುದೆ:

ಇ) ರಾಜ್ಯದಲ್ಲಿ ಅಕ್ರಮ ಮದ್ಯ ಮಾರಾಟದ ಜಾಲವು ಹೆಚ್ಚಾಗುತ್ತಿದ್ದು ಇವುಗಳನ್ನು ತಡೆಯುವಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

ಅ) ಉಡುಪಿ ಜಿಲ್ಲೆಯಲ್ಲಿ ಅಕ್ರಮ ಕಳ್ಳಭಟ್ಟಿ ಸಾರಾಯಿ ತಯಾರಿಸುತ್ತಿರುವ ಕೇಂದ್ರಗಳ ಮೇಲೆ ಅಬಕಾರಿ ವರ್ಷ 2003–04ರಲ್ಲಿ 1312 ದಾಳಿಗಳನ್ನು ನಡೆಸಿ ಒಟ್ಟು 7 ಪ್ರಕರಣಗಳನ್ನು ಪತ್ತೆ ಹಚ್ಚಿ 6 ವ್ಯಕ್ತಿಗಳನ್ನು ಬಂಧಿಸಿ 319 ಲೀಟರ್ ಕಳ್ಳಭಟ್ಟಿ ಸಾರಾಯಿ ವಶಪಡಿಸಿಕೊಳ್ಳಲಾಗಿದೆ. ಅಲ್ಲದೇ 525 ಲೀಟರ್ ನಕಲಿ ಸಾರಾಯಿ ಮತ್ತು 915 ಲೀಟರ್ ಕೊಳೆಯನ್ನು ನಾಶಪಡಿಸಲಾಗಿದೆ. ದಾಖಲಿಸಿದ ಮೊಕದ್ದಮೆ ಮತ್ತು ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯ ಕ್ಷೇತ್ರವಾರು ಮಾಹಿತಿಯನ್ನು ಅನುಬಂಧ–'ಅ' ರಲ್ಲಿ ನೀಡಲಾಗಿದೆ.

ಆ) ಹೌದು. ಈ ಸಂಬಂಧ ವಿಶೇಷ ತನಿಖೆ ಹಾಗೂ ದಾಳಿ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ.

ಇ) ಹೌದು. ರಾಜ್ಯದಲ್ಲಿ ಅಕ್ರಮ ಮದ್ಯ ಮಾರಾಟವನ್ನು ನಿಯಂತ್ರಿಸುವ ದಿಸೆಯಲ್ಲಿ ಕರ್ನಾಟಕ ರಾಜ್ಯ ಪಾನೀಯ ನಿಗಮವನ್ನು ಸ್ಥಾಪಿಸಿದ್ದು ಭಾರತೀಯ ಮದ್ಯ ವಹಿವಾಟಿನಲ್ಲಿ ಅಕ್ರಮ ಚಟುವಟಿಕೆಯನ್ನು ಬಹು ಮಟ್ಟಿಗೆ ನಿಯಂತ್ರಿಸಲಾಗಿದೆ. ಸಾರಾಯಿ ಮಾರಾಟ ವಿಭಾಗದಲ್ಲೂ ಸಹ ಸೆಕೆಂಡ್ಸ್ ಹಾವಳಿ ಇದ್ದು ಇದನ್ನು ತಡೆಗಟ್ಟುವ ದಿಸೆಯಲ್ಲಿ 2004–05ನೆ ಸಾಲಿನ ಆಯವ್ಯಯದಲ್ಲಿ ಸುಧಾರಣಾ ಕ್ರಮಗಳನ್ನು ಮಂಡಿಸಲಾಗಿದೆ.

ರಾಜ್ಯದಲ್ಲಿ ವ್ಯಾಪಕವಾಗಿ ಹೆಚ್ಚುತ್ತಿರುವ 'ಕಳ್ಳಭಟ್ಟಿಯ ನಿಯಂತ್ರಣಕ್ಕಾಗಿ ಹಾಗೂ ತೆರಿಗೆ ರಹಿತ ಮದ್ಯದ ವ್ಯವಹಾರವನ್ನು ತಡೆಗಟ್ಟುವ ಸಲುವಾಗಿ ಅಬಕಾರಿ ಇಲಾಖೆಯು ನಿರಂತರವಾಗಿ ದಾಳಿಗಳನ್ನು ನಡೆಸುತ್ತಿದೆ. ಅಗತ್ಯ ಇದ್ದಾಗಲೆಲ್ಲಾ ಪೊಲೀಸ್ ಇಲಾಖೆಯ ಸಹಕಾರವನ್ನು ಪಡೆದು ಸಂಯುಕ್ತ ದಾಳಿ ನಡೆಸಲಾಗುತ್ತದೆ. ವಿಚಕ್ಷಣೆಯನ್ನು ಚುರುಕುಗೊಳಿಸಿ ವಿಶೇಷ ತನಿಖೆ, ರಸ್ತೆಗಸ್ತು, ಜಾರಿ ಮತ್ತು ತಪಾಸಣೆಗಳನ್ನು ಕೈಗೊಂಡು ಅಕ್ರಮ ಮದ್ಯ ಮಾರಾಟ ಮಾಡುವವರ ವಿರುದ್ಧ ಹಾಗೂ ತಪ್ಪಿತಸ್ಥರ ಮೇಲೆ ಕಾನೂನಿನ ಪ್ರಕಾರ ಮೊಕದ್ದಮೆ ಹೂಡಿ ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಬಂಧ 'ಅ'

ಉಡುಪಿ ಜಿಲ್ಲೆಯಲ್ಲಿ ಕ್ಷೇತ್ರವಾರು ಅಕ್ರಮ ಕಳ್ಳಭಟ್ಟಿ ಸಾರಾಯಿ ವಶಪಡಿಸಿಕೊಂಡ ಮತ್ತು ಮೊಕದ್ದಮೆ ದಾಖಲಿಸಿದ ವಿವರಗಳು

ಉಡುಪಿ ತಾಲ್ಲೂಕು

ಕ್ರಮ ಸಂಖ್ಯೆ	ಪ್ರಥಮ ಮಾಹಿತಿ ವರದಿ ಸಂಖ್ಯೆ ಮತ್ತು ದಿನಾಂಕ	ಮೊಕದ್ದಮೆ ದಾಖಲಿಸಿದ ಸ್ಥಳ	ಆರೋಪಿಗಳ ಹೆಸರು ಮತ್ತು ವಿಳಾಸ	ಜಪ್ತು ಮಾಡಿದ ಕಳ್ಳಭಟ್ಟಿ ಸಾರಾಯಿ (ಲೀಟರ್‌ಗಳಲ್ಲಿ)
1	2	3	4	5
1	1/2003–04, ದಿನಾಂಕ 24–7–2003	ಹೆಜಮಾಡಿ ಗ್ರಾಮ ಉಡುಪಿ ತಾ:	ಚಂದ್ರ ಜಿ. ಮೆಂಡನ್ ಬಿನ್ ಗುರುವ ತಿಂಗಳಾಯ ಸರಸ್ವತಿ ನಿಲಯ, ಸಲ್ತಾನ್ ರಸ್ತೆ, ಹೆಜಮಾಡಿ ಗ್ರಾಮ, ಉಡುಪಿ ತಾ:	130
2.	4/2003–04 ದಿನಾಂಕ 19–9–2003	ಶಿವಳ್ಳಿ ಗ್ರಾಮ ಉಡುಪಿ ತಾ:	ವಿಠಲ್‌ನಾಯ್ಕ್ ಬಿನ್ ಬಡಿಯಾನಾಯ್ಕ್ ಶಿವಳ್ಳಿ ಗ್ರಾಮ, ಪೆರುಪಳ್ಳಿ, ಮಣಿಪಾಲ ಉಡುಪಿ ತಾಲ್ಲೂಕು	5
3.	4/2003–04 ದಿನಾಂಕ 8–10–2003	ಹೆಜಮಾಡಿ ಗ್ರಾಮ ಉಡುಪಿ ತಾ:	ಮಯೂರ ಎಂ ಪುತ್ರನ್ ಬಿನ್ ಮನೋಹರ್ ಪುತ್ರನ್, ಸೌತ್ ಸಲ್ತಾನ್ ರಸ್ತೆ, ಹೆಜಮಾಡಿ ಗ್ರಾಮ ಉಡುಪಿ ತಾ:	14
4.	8/2003–04 ದಿನಾಂಕ 15–10–2003	ಹಾವಂಚೆ ಗ್ರಾಮ ಉಡುಪಿ ತಾ:	ಮ್ಯಾಕ್ಸಿಸಿಂ ಡಿಸೋಜ ಬಿನ್ ದಿ/ಅಲ್ಸೆಕ್ಸ್ ಡಿಸೋಜ, ದಾಸಬೆಟ್ಟು, ಹಾವಂಚೆ ಗ್ರಾಮ, ಉಡುಪಿ ತಾ:	50
5.	7/2003–04 ದಿನಾಂಕ 26–3–2004	ಹೆಜಮಾಡಿ ಗ್ರಾಮ ಉಡುಪಿ ತಾ:	ಶಿವಾನಂದಾ ಮೊಗವೀರ ಬಿನ್ ಹೊನ್ನಯ್ಯ ಸುವರ್ಣ, ಮಟ್ಟುಪಟ್ಣ ನಿವಾಸ, ಹೆಜಮಾಡಿ ಗ್ರಾಮ, ಉಡುಪಿ ತಾ:	100

1	2	3	4	5
6.	22/2003–04 ದಿನಾಂಕ 17–5–2004	ಪೆರಂಪಳ್ಳಿ ಗ್ರಾಮ ಉಡುಪಿ ತಾ:	ಆರೋಪಿ ಪತ್ತೆಯಾಗಿರುವುದಿಲ್ಲ	15
ಕಾರ್ಕಳ ತಾಲ್ಲೂಕು				
1.	4/2003–04 ದಿನಾಂಕ 8–10–2003	ತಳ್ಳಾರು ಗ್ರಾಮ ಕಾರ್ಕಳ ತಾ:	ಹಿನಾಸ್ ಡಿಸೋಜ ಬಿನ್ ಅಂತೋನಿ ಡಿಸೋಜ, ಚೊಯವಿಲ್, ಉದ್ದಪಲಕೆ, ದುರ್ಗಾ, ತಳ್ಳಾರು ಗ್ರಾಮ ಕಾರ್ಕಳ ತಾ:	5

ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯಲ್ಲಿನ ಬುಡಕಟ್ಟು ಜನಾಂಗದವರಿಗೆ ಹಕ್ಕುಪತ್ರ ನೀಡುವ ಬಗ್ಗೆ

208 (689) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಹರಿಜನ, ಗಿರಿಜನ ಮತ್ತು ಬುಡಕಟ್ಟು ಜನಾಂಗದವರು ಬಹಳ ವರ್ಷಗಳಿಂದ ಕೃಷಿ ಮಾಡುತ್ತಿರುವ ಭೂಮಿಗೆ ಹಕ್ಕುಪತ್ರ ನೀಡಲಾಗುವುದೇ;

ಆ) ಹಾಗಿದ್ದಲ್ಲಿ, ಯಾವಾಗ ನೀಡಲಾಗುವುದು;

ಇ) ಇಲ್ಲಿ ವಾಸಿಸುವವರಿಗೆ ಮೂಲಭೂತ ಸೌಕರ್ಯಗಳಾದ ರಸ್ತೆ, ವಿದ್ಯುಚ್ಛಕ್ತಿ ಕುಡಿಯುವ ನೀರು ಹಾಗೂ ಆಸ್ಪತ್ರೆ ಕಲ್ಪಿಸಲು ಸಂಬಂಧಪಟ್ಟವರಿಗೆ ಅನುಮತಿ ನೀಡಲಾಗುವುದೇ;

ಈ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಹೌದು. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಬರುವ ರೆವಿನ್ಯೂ ಎನ್‌ಕ್ಲೋಸರ್‌ಗಳಲ್ಲಿನ ಅಕ್ರಮ ಸಾಗುವಳಿ ನಿಯಮಾನುಸಾರ ಸಕ್ರಮಗೊಳಿಸಿ ಹಕ್ಕುಪತ್ರ ನೀಡಲಾಗುವುದು.

ಆ) ನಮೂನೆ 50, 53ರ ಅರ್ಜಿಗಳನ್ನು ಸಮಿತಿಯ ಮುಂದೆ ಮಂಡಿಸಿ ಅರ್ಹ ಪ್ರಕರಣಗಳನ್ನು ಸಕ್ರಮಗೊಳಿಸಲು ಹಾಗೂ ಅನಧಿಕೃತ ಮನೆ ಸಕ್ರಮ ಅರ್ಜಿಗಳ ಬಗ್ಗೆ ನಿಯಮ ಪ್ರಕಾರ ಶೀಘ್ರ ಕ್ರಮ ವಹಿಸಿ ಜಮೀನು ಹಾಗೂ ವಾಸದ ಮನೆ ನಿರ್ಮಾಣಗಳನ್ನು ಸಕ್ರಮಗೊಳಿಸಿ, ಹಕ್ಕುಪತ್ರ ನೀಡಲು ಆಧ್ಯತೆ ಮೇಲೆ ಕ್ರಮ ವಹಿಸಲಾಗುತ್ತದೆ.

ಇ) ಸರ್ಕಾರದ ಅಧಿಸೂಚನೆ ಎಫ್.ಇ.ಇ:270:ಎಫ್‌ಡಬ್ಲ್ಯೂಎಲ್:99, ದಿನಾಂಕ 16–6–2001ರ ಪ್ರಕಾರ ವನ್ಯಜೀವಿ ಸಂರಕ್ಷಣಾ ಕಾಯ್ದೆ ಕಲಂ 35(4)ರ ಮೇರೆಗೆ ರಾಷ್ಟ್ರೀಯ ಉದ್ಯಾನವನವೆಂದು ಘೋಷಣೆ ಆಗಿರುತ್ತದೆ. ಆದ್ದರಿಂದ ವನ್ಯ ಜೀವಿಗಳ ಜೀವನಕ್ಕೆ ಬಂಗ ಬಾರದೇ ಇದ್ದಲ್ಲಿ ರೆವಿನ್ಯೂ ಎನ್‌ಕ್ಲೋಸರ್ಸ್ ಕನಿಷ್ಟ ಸೌಲಭ್ಯಗಳಿಗೆ ಅವಕಾಶ ಇದೆ. ಒಂದು ವೇಳೆ ರಾಷ್ಟ್ರೀಯ ಉದ್ಯಾನವನದಿಂದ ಸ್ವಇಚ್ಛೆ ಮೇರೆಗೆ ಹೊರಗೆ ಬಂದು ವಾಸ ಮಾಡಲು ಇಚ್ಛಿಸುವವರಿಗೆ ಪುನರ್ ವಸತಿ ಕಲ್ಪಿಸುವ ಯೋಜನೆ ಸರ್ಕಾರ ಪರಿಶೀಲಿಸುತ್ತಿದೆ.

ಈ) ಮೇಲಿನ ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.